ದಿನಾಂಕ: 20.08.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀಸವಾಲು: **5** ರಿಂದ **8** ನೇ ಪ್ರತಿವಾದಿಗಳ ಪರ ವಕೀಲರಿಂದ:

ಅಪ್ಪಣ್ಣರವರಿಗೆ ಮದವಾಲ್‌ದಲ್ಲಿ ಒಟ್ಟು 3 ಆಸ್ತಿಗಳು ಬೇರೆ ಬೇರೆ ಕಡೆ ಇದ್ದವು. ಸರ್ವೇ ನಂ.325, 298 ಮತ್ತು 305 ಆಗಿರುತ್ತವೆ. ಇವುಗಳನ್ನು ಹೊರತು ಪಡಿಸಿ ಬೇರೆ ಆಸ್ತಿಗಳು ಇರುವುದಿಲ್ಲ. ಅಪ್ಪಣ್ಣರವರಿಗೆ ಸೇರಿದ ಆಸ್ತಿಗಳು ಸರ್ವೇ ನಂ.294, 156, 47 ಮತ್ತು 330 ಇದ್ದವು ಎಂದರೆ ಸರಿ. ಸದರಿ ಆಸ್ತಿಗಳು ನಾನು ದಾವೆ ಸಲ್ಲಿಸುವಾಗ ಅಪ್ಪಣ್ಣರವರ ಹೆಸರಿನಲ್ಲಿದ್ದವು. ಅವರು ಯಾವಾಗ ತೀರಿಕೊಂಡರು ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ಮೃತಪಟ್ಟು 30 ವರ್ಷಗಳಾಗಿವೆ. ಅಪ್ಪಣ್ಣ ಮೃತಪಟ್ಟ ನಂತರ ನನ್ನ ತಂದೆ ಮೃತಪಟ್ಟರು ಎಂದರೆ ಸರಿ. ಅಪ್ಪಣ್ಣ ಮೃತಪಟ್ಟ ನಂತರ ಸದರಿ ಸರ್ವೇ ನಂ. 294, 156, 47 ಮತ್ತು 330 ಖಾತೆ ಅವರ ವಾರಸುದಾರರಿಗೆ ಬದಲಾವಣೆ ಆಯಿತು ಎಂದರೆ ಸರಿ.

2. ಸರ್ವೇ ನಂ.298 ರ ಒಟ್ಟು ಕ್ಷೇತ್ರ 9 ಎಕರೆ 15 ಗುಂಟೆ ಇರುತ್ತದೆ. ಸದರಿ 9 ಎಕರೆ 15 ಗುಂಟೆ ಸರ್ವೇ ನಂ.298/1 ಕ್ಕೆ ಸೇರಿದ ಜಮೀನು ಎಂದರೆ ಸರಿ. ಸದರಿ ಸರ್ವೇ ನಂ.298 ರಲ್ಲಿ ಹಿಸ್ಸಾಗಳು ಆಗಿವೆ ಎಂದರೆ ಸರಿ. ಸಾಕ್ಷಿ ಅದರಲ್ಲಿ ಒಟ್ಟು 18 ಎಕರೆ 30 ಗುಂಟೆ ಜಮೀನು ಇದೆ ಎನ್ನುತ್ತಾರೆ. ಸದರಿ ಜಮೀನು ದೇಶಪಾಂಡೆರವರ ಹೆಸರಿನಲ್ಲಿ ಇತ್ತು. 9 ಎಕರೆ 15 ಗುಂಟೆ ಮತ್ತು 9 ಎಕರೆ 15 ಗುಂಟೆ ಹೇಗೆ ಹಿಸ್ಸಾ ಆಯಿತು ಎಂದರೆ ಸಾಕ್ಷಿ ನನ್ನ ಅಜ್ಜ 9 ಎಕರೆ 15 ಗುಂಟೆ ಜಮೀನಿನಲ್ಲಿ ವ್ಯವಸಾಯ ಮಾಡುತ್ತಿದ್ದರು, ಗೂಳಪ್ಪ ನಿರ್ವಾಣಿರವರು ಉಳಿದ 9 ಎಕರೆ 15 ಗುಂಟೆ ಜಮೀನಿನಲ್ಲಿ ವ್ಯವಸಾಯ ಮಾಡುತ್ತಿದ್ದರು ಎಂದು ನುಡಿದಿದ್ದಾರೆ. ನನ್ನ ಅಜ್ಜ ಆ ರೀತಿ ವ್ಯವಸಾಯ ಮಾಡುತ್ತಿದ್ದರು ಎಂದು ತೋರಿಸಲು ಡೈರಿ ಉತಾರವನ್ನು ಹಾಜರು ಪಡಿಸಿದ್ದೇನೆ. ಸಾಕ್ಷಿಗೆ ಅವರು ಹಾಜರು ಪಡಿಸಿರುವ ದಾಖಲೆಗಳನ್ನು ತೋರಿಸಿ ಆ ಡೈರಿ ಉತಾರ ಯಾವುದು

ಎಂದು ಕೇಳಲಾಗಿ ನನಗೆ ಕನ್ನಡಕ ಬೇಕು ನಾನು ಮರೆತು ಬಂದಿದ್ದೇನೆ ಎಂದು ನುಡಿದಿದ್ದಾರೆ. ದೇಶಪಾಂಡೆರವರ ಕುಟುಂಬದಿಂದ ನಿಮ್ಮ ಅಜ್ಜ ಅಪ್ಪಯ್ಯರವರಿಗೆ ಸರ್ವೇ ನಂ.298/1 ರ ಜಮೀನು ಹೇಗೆ ಮತ್ತು ಯಾವ ರೀತಿ ಬಂತು ಎಂದರೆ ಸಾಕ್ಷಿ ನನ್ನ ತಂದೆಯ ಜೊತೆ 4 ಜನ ಅಣ್ಣತಮ್ಮಂದಿರು, ಅಪ್ಪರಾಯಪ್ಪ ಒಬ್ಬನೇ ಮಗ ಎಂದು ದಾಖಲು ಮಾಡಿಕೊಂಡಿದ್ದಾರೆ. ನಂತರ ಅಪ್ಪರಾಯಪ್ಪ ದೇಶಪಾಂಡೆರವರ ಕಡೆಯಿಂದ ಸದರಿ ಜಮೀನನ್ನು ಖರೀದಿ ಮಾಡಿಕೊಂಡಿದ್ದಾರೆ. 1973-74 ರಲ್ಲಿ ಅವರು ಖರೀದಿಗೆ ತೆಗೆದುಕೊಂಡಿದ್ದಾರೆ. ಅವರು ಆಗ ಸರ್ಕಾರಿ ಶಿಕ್ಷಕರಾಗಿದ್ದರು. ಅಪ್ಪರಾಯಪ್ಪನಿಗೆ ಸರ್ಕಾರದಿಂದ ಸಂಬಳ ಬರುತ್ತಿತ್ತು. ತಿಂಗಳಿಗೆ ರೂ.20, 30 ಬರುತ್ತಿತ್ತು.

3. 1976 ರಲ್ಲಿ ಸರ್ವೇ ನಂ.325, 294, 156, 330 ಮತ್ತು 47 ರ ಆಸ್ತಿಗಳಲ್ಲಿ 4 ಪಾಲುಗಳು ಆಗಿರುತ್ತವೆ. ಸದರಿ ಆಸ್ತಿಗಳಲ್ಲಿ ನಮ್ಮ ತಂದೆಯ ಪಾಲಿಗೆ ಒಟ್ಟು 2 ಎಕರೆ ಜಮೀನು ಬಂದಿರುತ್ತದೆ. ಸದರಿ ವಿಭಾಗದಲ್ಲಿ ಬಂದಂತಹ ಅವರ ಅವರ ಪಾಲುಗಳನ್ನು ಅವರವರು ವ್ಯವಸಾಯ ಮಾಡಿಕೊಂಡು ಕಬ್ಜೆಯಲ್ಲಿ ಇದ್ದುಕೊಂಡು ಬಂದಿದ್ದಾರೆ ಎಂದರೆ ಸರಿ. ಸದರಿ ವಿಭಾಗವನ್ನು ನನ್ನ ತಂದೆ ಮತ್ತು ಅವರ ಸಹೋದರರು ಒಪ್ಪಿಕೊಂಡಿದ್ದಾರೆ ಎಂದರೆ ಸರಿ. ಸದರಿ ವಿಭಾಗಕ್ಕೆ ಸಂಬಂದಪಟ್ಟ ಹಾಗೆ ನನ್ನ ತಂದೆ ಹಾಗೂ ಅವರ ಸಹೋದರರ ನಡುವೆ ಯಾವುದೇ ರೀತಿಯ ಭಿನ್ನಾಭಿಪ್ರಾಯಗಳು ಮತ್ತು ತಕರಾರುಗಳು ಉದ್ಭಸಿರುವುದಿಲ್ಲ. ನನ್ನ ತಂದೆಗೆ ಸದರಿ ವಿಭಾಗದಲ್ಲಿ ಬಂದ 2 ಎಕರೆ ಜಮೀನನ್ನು ನಾನು ಹಾಗೂ ನನ್ನ ಸಹೋದರರು ವಿಭಾಗ ಮಾಡಿಕೊಂಡಿದ್ದೇವೆ. ನನ್ನ ಪಾಲಿಗೆ ಬಂದ ಆಸ್ತಿಯಲ್ಲಿ ನಾನು ಕಬ್ಜೆಯಲ್ಲಿದ್ದೇನೆ. ಅದೇರೀತಿ ಸರ್ವೇ ನಂ.298 ರಲ್ಲಿಯೂ ಸಹ ನಾನು ಕಬ್ಜೆಯಲ್ಲಿದ್ದು ಊಟ ಮಾಡುತ್ತಿದ್ದೇನೆ. ನನ್ನ ಹಾಗೂ ನನ್ನ ತಮ್ಮನ ನಡುವೆಯಾದ ವಿಭಾಗವನ್ನು ನಾವಿಬ್ಬರೂ ಒಪ್ಪಿಕೊಂಡಿದ್ದೇವೆ ನಮ್ಮ ನಡುವೆ ಅದಕ್ಕೆ ಸಂಭಂದಿಸಿದ ಹಾಗೆ ಯಾವುದೇ ತಕರಾರು ಇರುವುದಿಲ್ಲ. 2 ಮತ್ತು 3 ನೇ ಪ್ರತಿವಾದಿಗಳು ಸಹ ಅವರ ವಿಭಾಗದಲ್ಲಿ ಅವರಿಗೆ ಬಂದಂತಹ ಪಾಲುಗಳ ಸ್ವಾಧೀನ

ಹೊಂದಿ ವ್ಯವಸಾಯ ಮಾಡಿಕೊಂಡು ಹೋಗುತ್ತಿದ್ದಾರೆ ಹಾಗೂ ಯಾವುದೇ ತಕರಾರು ಇರುವುದಿಲ್ಲ ಎಂದರೆ ಸರಿ.

3. 5 ರಿಂದ 8 ನೇ ಪ್ರತಿವಾದಿಗಳು ಸಹ ಅವರ ತಂದೆಯಿಂದ ಬಂದಂತಹ ಆಸ್ತಿಗಳನ್ನು ವಿಭಾಗ ಮಾಡಿಕೊಂಡು ಅದರ ಸ್ವಾಧೀನ ಹೊಂದಿ ವ್ಯವಸಾಯ ಮಾಡಿಕೊಂಡು ಹೋಗುತ್ತಿದ್ದಾರೆ ಹಾಗೂ ಯಾವುದೇ ತಕರಾರು ಇರುವುದಿಲ್ಲ ಎಂದರೆ ಸರಿ. ಅಪ್ಪರಾಯಪ್ಪನಿಗೆ 4 ಜನ ಮಕ್ಕಳು ಇದ್ದಾರೆ. ಅವರು ಸುರೇಶ್, ರಮೇಶ್, ಶಿವಂತಾ ಮತ್ತು ರಾಜೇಂದ್ರ ಆಗಿರುತ್ತಾರೆ. ದಾವಾ ಸಲ್ಲಿಸಲು ಮಾಹಿತಿಯನ್ನು ನನ್ನ ವಕೀಲರಿಗೆ ನಾನೇ ಕೊಟ್ಟಿರುತ್ತೇನೆ. ಅದೇರೀತಿ ನನ್ನ ಸಾಕ್ಷ್ಯ ಪ್ರಮಾಣಪತ್ರವನ್ನು ತಯಾರಿಸಲು ಮಾಹಿತಿಯನ್ನು ನನ್ನ ವಕೀಲರಿಗೆ ನಾನೇ ಕೊಟ್ಟಿರುತ್ತೇನೆ. ಶಿವಂತಾವರವನ್ನು ಈ ದಾವೆಯಲ್ಲಿ ಪಕ್ಷಗಾರಳನ್ನಾಗಿ ಮಾಡಿಲ್ಲ. ಅವರನ್ನು ಪಕ್ಷಗಾರರನ್ನಾಗಿ ಮಾಡಲು ನನಗೆ ಏನು ತೊಂದರೆ ಇರಲಿಲ್ಲ.

ಸಮಯ ಕೋರಿದ್ದು ಮುಂದೂಡಲಾಯಿತು.

<u>ಮರುವಿಚಾರಣೆ:</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ.ಸರಿ ಅದೆ.

(ಕೆ ಎಮ್ ಶಂಕರ್)
1 ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ